ಕರ್ನಾಟಕ ಸರ್ಕಾರ
(ಸಿ.ಆರ್.ಪಿ.67)

ಹೇಳಿಕೆ ಹಾಳೆ
(ಆರ್.ಪಿ.ಸಂಖ್ಯೆ 57)
ನಮೂನೆ ಸಂಖ್ಯೆ 4

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್ ನ್ಯಾಯಾಧೀಶರ ನ್ಯಾಯಾಲಯ, ಹಾಸನ**

**ಸ್ಪೆಷಲ್ ಕೇಸ್ ನಂಬರ್ : 28/2010**

**ಫ್ರಾಸಾ- 46 ಚಾಸಾ- 56**

| | | |
|---|---|---|
| ಸಾಕ್ಷಿದಾರರ ಹೆಸರುಃ | : | ಕಲಾ ಕೃಷ್ಣಸ್ವಾಮಿ |
| ಗಂಡನ ಹೆಸರುಃ | : | ಸಿ ಕೆ ಬಾಬು |
| ವಯಸ್ಸುಃ | : | 48 ವರ್ಷ |
| ಉದ್ಯೋಗಃ | : | ಡಿ ಐಜಿ ಕ್ರೈಂ |
| ವಾಸ | : | ಬೆಂಗಳೂರು |

**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕ: 05-03-2026:**

**ಮುಖ್ಯ ವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ವಿಶೇಷ ಅಭಿಯೋಜಕರಿಂದಃ**

ನಾನು ಸಕಲೇಶಪುರ ಉಪವಿಭಾಗದಲ್ಲಿ ಡಿ ವೈ ಎಸ್ ಪಿ ಆಗಿ ಡಿಸೆಂಬರ್ 2008ರಿಂದ ಜೂನ್ 2011ರವರೆಗೆ ಕರ್ತವ್ಯ ನಿರ್ವಹಿಸಿರುತ್ತೇನೆ.

2.ದಿನಾಂಕ 2-11-2009ರಂದು ಈ ಪ್ರಕರಣದ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ-53 ರವರಿಂದ ಸ್ವೀಕರಿಸಿ ಅಲ್ಲಿಯವರೆಗಿನ ತನಿಖೆಯನ್ನು ಪರಿಶೀಲಿಸಿದೆನು.

3.ದಿನಾಂಕ 3-11-2009ರಂದು ಹಾಸನ ಸಹಾಯಕ ಔಷಧ ನಿಯಂತ್ರಕರಿಗೆ ಮನವಿ ಸಲ್ಲಿಸಿ Buprigesic injection ಎನ್ ಡಿ ಪಿ ಎಸ್ ಕಾಯಿದೆಯಡಿ ಬರುತ್ತದೆಯೇ ಎಂಬ ಬಗ್ಗೆ ಮಾಹಿತಿ ಕೇಳಿರುತ್ತೇನೆ. ಅದರಂತೆ ಅವರು ಅದೇ ದಿನಾಂಕದಂದು ನಿಪಿ-80ರಂತೆ ಮಾಹಿತಿಯನ್ನು ನೀಡಿ ಅದು ಎನ್.ಡಿ.ಪಿ.ಎಸ್ ಕಾಯಿದೆಯಡಿಯಲ್ಲಿ ಬರುತ್ತದೆ ಎಂದು ಹೇಳಿರುತ್ತಾರೆ. ನಂತರ ನ್ಯಾಯಾಲಯಕ್ಕೆ ಎನ್.ಡಿ.ಪಿ.ಎಸ್ ಕಾಯಿದೆಯಡಿಯಲ್ಲಿ ಕಲಂ 21, 25ನ್ನು ಅಳವಡಿಸಿಕೊಳ್ಳುವಂತೆ ಅದೇದಿನ ಮನವಿ

ಸಲ್ಲಿಸಿರುತ್ತೇನೆ.

4.ದಿನಾಂಕ 4-1-2009ರಂದು ಹಾಸನ ಔಷಧ ನಿಯಂತ್ರಕರಿಗೆ 1ನೇ ಆರೋಪಿಯ ಪರವಾನಿಗೆಯನ್ನು ರದ್ದುಗೊಳಿಸಬೇಕಾಗಿ ಮನವಿ ಸಲ್ಲಿಸಿದ್ದೆನು. ಅದಕ್ಕೆ ಅವರು ದಿನಾಂಕ 10-11-2009ರಂದು ನಿಪಿ-81ರಂತೆ ಪತ್ರ ಬರೆದು ಸದರಿಯವರ ಮೆಸರ್ಸ್ ಎನ್ ಎಸ್ ಮೆಡಿಕಲ್ಸ್ ನ ಪರವಾನಿಗೆಯನ್ನು ರದ್ದುಗೊಳಿಸಿರುವುದಾಗಿ ತಿಳಿಸಿರುತ್ತಾರೆ. ಸದರಿ ಪತ್ರಕ್ಕೆ ನಾನು ಸಹಿ ಹಾಕಿದ್ದು ನಿಪಿ-81(ಬಿ) ಎಂದು ಗುರುತಿಸಲಾಯಿತು.

5.ದಿನಾಂಕ 5-11-2009ರಂದು ಶಿವಮೊಗ್ಗದ ಶ್ರೀ ಸಾಯಿ ಟ್ರ್ಯಾನ್ಸ್ಪೋರ್ಟ್ ಮತ್ತು ಕೊರಿಯರ್ ಸರ್ವೀಸ್ ನಲ್ಲಿ buprigesic injection ನ್ನು ವಶಪಡಿಸಿಕೊಳ್ಳಬೇಕಾದ ಕಾರಣ ಪಂಚರಾದ ಮಲ್ಲಿಕಾರ್ಜುನ ಮತ್ತು ಕೃಷ್ಣರವರನ್ನು ಕರೆದುಕೊಂಡು ಸಕಲೇಶಪುರದಿಂದ ಹೊರಟು ಶಿವಮೊಗ್ಗದಲ್ಲಿರುವ ಕೆ ಎಸ್ ಅರ್ ಟಿ ಸಿ ಬಸ್ ನಿಲ್ದಾಣದ ಬಳಿ ಇದ್ದ ಸದರಿ ಕಛೇರಿಗೆ ಹೋದೆವು. ಅಲ್ಲಿ ಕಛೇರಿಯಲ್ಲಿ ಕೆಲಸ ನಿರ್ವಹಿಸುತ್ತಿದ್ದ ತಾಜ್ ಎಂಬುವವರಿಗೆ ಎಲ್ ಆರ್ ನಂಃ30112153ಗೆ ಸಂಬಂಧಪಟ್ಟಂತೆ ವಸ್ತುವನ್ನು ಹಾಜರುಪಡಿಸಲು ಹೇಳಿರುತ್ತೇನೆ. ಸದರಿಯವರು ಒಂದು ಬಾಕ್ಸ್ ಮತ್ತು 2 ರಶೀದಿಗಳನ್ನು ಹಾಜರುಪಡಿಸಿದರು. ಸದರಿ ಬಾಕ್ಸನ್ನು ಪರಿಶೀಲಿಸಿದಾಗ ಅದು ಒಂದು ರಟ್ಟಿನ ಬಾಕ್ಸ್ ಆಗಿದ್ದು ಅದರ ಒಳಗಡೆ 12 ಬಾಕ್ಸ್ ಗಳಿದ್ದವು. ಅದರ ಮೇಲೆ buprigesic buprinorphin hydrochloride injection ಎಂದು ಬರೆದಿತ್ತು. ಆ 12 ಬಾಕ್ಸ್ ಗಳಲ್ಲಿ ಚಿಕ್ಕ ಚಿಕ್ಕ 10 ಬಾಕ್ಸ್ ಗಳಿದ್ದು ಪ್ರತಿಯೊಂದು ತಲಾ 10 ಇಂಜೆಕ್ಷನ್ ಟ್ಯೂಬುಗಳಿದ್ದು ಎಲ್ಲವನ್ನೂ ಪರಿಶೀಲಿಸಿದಾಗ ಒಟ್ಟು 1200 ಇಂಜೆಕ್ಷನ್ ಟ್ಯೂಬುಗಳು ಇದ್ದವು. ಸದರಿ ಬಾಕ್ಸುಗಳಿಂದ ತಲಾ ಒಂದರಂತೆ 12 ಇಂಜೆಕ್ಷನ್ ಟ್ಯೂಬುಗಳನ್ನು ಪ್ರತ್ಯೇಕವಾಗಿ ತೆಗೆದು ಪ್ರತಿಯೊಂದನ್ನು ಪ್ರತ್ಯೇಕವಾಗಿ ಬಿಳಿ ಬಟ್ಟೆ ಚೀಲದಲ್ಲಿ ಹಾಕಿ ಹೊಲಿದು ಎ ಎಂಬ ಅಕ್ಷರದಿಂದ ಸೀಲು ಮಾಡಿ ಪಂಚರ ಸಹಿ ಇರುವ ಚೀಟಿ ಅಂಟಿಸಿರುತ್ತೇನೆ. ಇನ್ನುಳಿದ ಇಂಜೆಕ್ಷನ್ ಟ್ಯೂಬುಗಳನ್ನು ರಟ್ಟಿನ ಬಾಕ್ಸ್ ನಲ್ಲಿಟ್ಟು, ಬಿಳಿ ಬಟ್ಟೆ ಚೀಲದಲ್ಲಿ ಹಾಕಿ ಹೊಲಿದು ಎ ಎಂಬ ಅಕ್ಷರದಿಂದ ಸೀಲು ಮಾಡಿ ಪಂಚರ ಸಹಿ ಇರುವ ಚೀಟಿ ಅಂಟಿಸಿರುತ್ತೇನೆ. ನಂತರ ಆ ಎರಡು

ರಶೀದಿಗಳನ್ನು ಪರಿಶೀಲಿಸಿದಾಗ ಒಂದು ರಶೀದಿ ಕೆಂಪು ಬಣ್ಣದಲ್ಲಿದ್ದು ಇನ್ನೊಂದು ಹಳದಿ ಬಣ್ಣದ್ದಾಗಿದ್ದು ರಶೀದಿಯಲ್ಲಿ ಶ್ರೀ ಸಾಯಿ ಟ್ರ್ಯಾನ್ಸ್ಪೋರ್ಟ್ ಮತ್ತು ಕೊರಿಯರ್ ಮತ್ತು ಎನ್ ಎಸ್ ಮೆಡಿಕಲ್ಸ್ ಸಕಲೇಶಪುರ ಈ ಎರಡೂ ವಿಳಾಸ ನಮೂದಾಗಿತ್ತು. ರಶೀದಿ ಕೆಳಭಾಗದಲ್ಲಿ ಆರ್ ಎಂಬ ಆಂಗ್ಲ ಅಕ್ಷರದಿಂದ ಪ್ರಾರಂಭವಾಗುವ ಸಹಿ ಇತ್ತು. ಈ ಎರಡೂ ರಶೀದಿಗಳ್ಳು ಒಂದು ಕವರಿಗೆ ಹಾಕಿ ಎ ಎಂಬ ಅಕ್ಷರದಿಂದ ಸೀಲು ಮಾಡಿ ಪಂಚರ ಸಹಿ ಇರುವ ಚೀಟಿ ಅಂಟಿಸಿದೆನು. ಎಲ್ಲಾ ವಸ್ತುಗಳನ್ನು ವಶಪಡಿಸಿಕೊಂಡು ನಿಪಿ-23 ರಂತೆ ಪಂಚನಾಮೆ ನಡೆಸಿದೆನು. ಅದರಲ್ಲಿ ನನ್ನ ರುಜು ಇದ್ದು ನಿಪಿ-23(ಸಿ) ಎಂದು ಗುರುತಿಸಲಾಯಿತು. ತಾಜ್ ರವರ ಹೇಳಿಕೆ ಮಾಡಿಕೊಂಡಿರುತ್ತೇನೆ. ವಶಪಡಿಸಿಕೊಂಡ ಮಾಲುಗಳೊಂದಿಗೆ ಕಛೇರಿಗೆ ವಾಪಸ್ ಬಂದು ಅವುಗಳನ್ನು ಮಾಲುಪಟ್ಟಿ ಸಂಖ್ಯೆ 177/2009ರಲ್ಲಿ ಅಳವಡಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡೆನು. ಆ ದಿವಸ ವಶಪಡಿಸಿಕೊಂಡ 12 ಟ್ಯೂಬುಗಳನು ರಾಸಾಯನಿಕ ವಿಶ್ಲೇಷಣೆಗಾಗಿ 4ನ್ನು ಕಳುಹಿಸಿರುತ್ತೇವೆ. ಆ 12 ಟ್ಯೂಬುಗಳನು ಬಿಟ್ಟು ಉಳಿದ 1188ಟ್ಯೂಬುಗಳನು ನೋಡಿದರೆ ಗುರುತಿಸುತ್ತೇನೆ. ನ್ಯಾಯಾಲಯದ ಮುಂದಿರುವ 12 ಚಿಕ್ಕಚಿಕ್ಕ ರಟ್ಟಿನ ಬಾಕ್ಸುಗಳಲ್ಲಿರುವುದು ಟ್ಯೂಬುಗಳು ಅವೇ ಟ್ಯೂಬುಗಳಾಗಿರುತ್ತವೆ. ಸಾಕ್ಷಿಯು ಗುರುತಿಸಿದ 12 ರಟ್ಟಿನ ಬಾಕ್ಸುಗಳನ್ನು ಒಟ್ಟಾಗಿ ಎಂ.ಒ.8 ಎಂದು, ಅದರೊಳಗಿದ್ದ ಚಿಕ್ಕ ಚಿಕ್ಕ 10 ಬಾಕ್ಸುಗಳನ್ನು ಪರಿಶೀಲಿಸಿದಾಗ 9 ಚಿಕ್ಕ ರಟ್ಟಿನ ಬಾಕ್ಸುಗಳಲ್ಲಿ ತಲಾ 10ರಂತೆ ಮತ್ತು ಒಂದು ಚಿಕ್ಕ ರಟ್ಟಿನ ಬಾಕ್ಸಲ್ಲಿ 9 ಟ್ಯೂಬುಗಳಿರುವುದು ಕಂಡುಬಂದಿರುತ್ತದೆ. ಆ ಚಿಕ್ಕ ಚಿಕ್ಕ ರಟ್ಟಿನ ಬಾಕ್ಸುಗಳನ್ನು ಒಟ್ಟಾಗಿ ಎಂ.ಒ.8(1) ಎಂದು ಅದರಲ್ಲಿರುವ ಒಟ್ಟು ಟ್ಯೂಬುಗಳನ್ನು ಒಟ್ಟಾಗಿ ಎಂ.ಒ.8(1ಎ) ಎಂದು ಗುರುತಿಸಲಾಯಿತು.

6.ರಾಸಾಯನಿಕ ವಿಶ್ಲೇಷಣೆಗಾಗಿ ಕಳುಹಿಸಿ ಉಳಿದ 8 ಇಂಜೆಕ್ಷನ್ ಟ್ಯೂಬುಗಳನ್ನು ನೋಡುತ್ತಿದ್ದು ಅದನ್ನು ಒಟ್ಟಾಗಿ ಎಂ.ಒ.9 ಎಂದು ಗುರುತಿಸಲಾಯಿತು. 13-11-2009ರಂದು 4 ಟ್ಯೂಬುಗಳನ್ನು ಎಫ್ ಎಸ್ ಎಲ್ ಬೆಂಗಳೂರಿಗೆ ಕಳುಹಿಸಿರುತ್ತೇನೆ. ಅವುಗಳನ್ನು ನೋಡಿದರೆ ಗುರುತಿಸುತ್ತೇನೆ. **(**ಮಾನ್ಯ ಅಭಿಯೋಜಕರು ನ್ಯಾಯಾಲಯದ ಮುಂದೆ ಇರುವ ಬಟ್ಟೆಯಿಂದ ಪ್ಯಾಕು ಮಾಡಿ ಸೀಲು ಮಾಡಿರುವ **4** ಪ್ಯಾಕೇಟನ್ನು ಒಡೆಯಲು ಅನುಮತಿ ಕೋರಿದ್ದು, ಅನುಮತಿ ನೀಡಿದೆ**)** ಬಟ್ಟೆಯಿಂದ ಪ್ಯಾಕು ಮಾಡಿದ ಸೀಲಾದ ಪ್ಯಾಕನ್ನು ತೆರೆದು ಅದರೊಳಗಿರುವ ವಸ್ತುವನ್ನು ತೋರಿಸಿದಾಗ ಅದರೊಳಗಿರುವ 4 buprigesic injection tube ಗಳನ್ನು ಗುರುತಿಸಿರುತ್ತಾರೆ. ಅವುಗಳು ಒಟ್ಟಾಗಿ

ಎಂ.ಒ.10 ಎಂದು ಗುರುತಿಸಲಾಯಿತು. ಅವುಗಳನ್ನು ಪ್ಯಾಕು ಮಾಡಿದ ಬಟ್ಟೆಯಮೇಲೆ ನನ್ನ ಹಾಗೂ ಪಂಚರ ಸಹಿ ಇರುವ ಚೀಟಿ ಅಂಟಿಸಿರುತ್ತೇನೆ. ಆ ಚೀಟಿಯನ್ನು ನೋಡುತ್ತಿದ್ದು ಪ್ಯಾಕು ಮಾಡಿದ ಎಲ್ಲಾ ಬಟ್ಟೆಯನ್ನು ಎಂ.ಒ.10(1) ಎಂದು ಎಲ್ಲಾ ಚೀಟಿಗಳನ್ನು ಎಂ.ಒ.10(1ಎ) ಎಂದು ಹಾಗೂ ಸಾಕ್ಷಿಯ ಎಲ್ಲಾ ಸಹಿಗಳನ್ನು ಎಂ.ಒ.10(1ಎ1) ಎಂದು ಗುರುತಿಸಲಾಯಿತು.

7.ದಿನಾಂಕ 6-11-2009ರಂದು ಜೆ ಎಂ ಎಫ್ ಸಿ ನ್ಯಾಯಾಲಯಕ್ಕೆ ಮನವಿ ಸಲ್ಲಿಸಿ ಪ್ರಕರಣವನ್ನು ಜಿಲ್ಲಾ ಮತ್ತ ಸೆಷನ್ಸ್ ನ್ಯಾಯಾಲಯಕ್ಕೆ ವರ್ಗಾಯಿಸುವಂತೆ ಕೋರಿರುತ್ತೇನೆ.

8.ದಿನಾಂಕ 10-11-2009ರಂದು 1ನೇ ಆರೋಪಿತರ ಮನೆಯನ್ನು ಶೋಧನೆ ಮಾಡಲು ಶೋಧನಾ ವಾರೆಂಟ್ ನೀಡುವಂತೆ ಜಿಲ್ಲಾ ನ್ಯಾಯಾಲಯಕ್ಕೆ ಮನವಿ ಸಲ್ಲಿಸಿರುತ್ತೇನೆ.

9.ದಿನಾಂಕ 11-11-2009ರಂದು ನ್ಯಾಯಾಲಯದ ಆದೇಶದಂತೆ ಆರೋಪಿಯ ಮನೆಯನ್ನು ಪಂಚರಾದ ಡಾಃರವಿಕಿರಣ್ ಮತ್ತು ಡಾಃ ಅಶೋಕ್ ರವರ ಸಮಕ್ಷಮ ಶೋಧನೆ ನಡೆಸಿದ್ದು ಅಲ್ಲಿ ಯಾವುದೇ ರೀತಿಯ buprigesic injection tube ಗಳು ಸಿಕ್ಕಿರುವುದಿಲ್ಲ. ಆರೊಪಿಯ ಮೇಲಿನ ಆರೋಪವು ಎನ್ ಡಿ ಪಿ ಎಸ್ ಕಾಯಿದೆಯಡಿ ಬರುತ್ತಿದ್ದರಿಂದ 1ನೇ ಆರೋಪಿಯನ್ನು ದಸ್ತಗಿರಿ ಮಾಡಲು ಮನವಿ ಕೋರಿ ಜಿಲ್ಲಾ ನ್ಯಾಯಾಲಯಕ್ಕೆ ಮವಿ ಸಲ್ಲಿಸಿರುತ್ತೇನೆ.

10.ದಿನಾಂಕ 12-11-2009ರಂದು ನ್ಯಾಯಾಲಯದಿಂದ ಅನುಮತಿ ಪಡೆದು 1ನೇ ಆರೋಪಿಯ ಮೇಲೆ ಮರುಬಂಧನ ಕ್ರಮ ಜರುಗಿಸಿ ವಿಚಾರಣೆ ಮಾಡಿ ಮುಂದುವರೆದ ಸ್ವಇಚ್ಚಾ ಹೇಳಿಕೆ ಮಾಡಿಕೊಂಡಿರುತ್ತೇನೆ. ಸದರಿ ಸ್ವಇಚ್ಚಾ ಹೇಳಿಕೆಯಲ್ಲಿ ತಾನು ಸದರಿ ಇಂಜೆಕ್ಷನ್ ಗಳನ್ನು ಷಹಜಹಾನ್ ಮತ್ತು ನಾಜಿರ್ ಎಂಬುವವರಿಗೆ ಮಾರಾಟ ಮಾಡುತ್ತಿದ್ದು ಕರೆದುಕೂಂಡು ಹೋದರೆ ಗುರುತಿಸುತ್ತೇನೆ ಎಂದು ಮತ್ತು ಇಂಜೆಕ್ಷ್ ಗಳನ್ನು ವಿ ಆರ್ ಎಲ್ ಕಂಪೆನಿ ಮುಖಾಂತರ ತರಿಸಿಕೊಳ್ಳುತ್ತಿದ್ದೆ, ಸದರಿ ಇಂಜೆಕ್ಷನ್ ಮಾರಾಟ ಮಾಡಿ ಬಂದ ಹಣವನ್ನು ಒಮ್ಮೊಮ್ಮೆ ಹಣವನು ಬ್ಯಾಂಕ್

ಗೆ ಜಮಾ ಮಾಡುತ್ತಿದ್ದೆ ಕೆಲವೊಮ್ಮೆ ಜಮಾ ಮಾಡದೆ ಮನೆಯಲ್ಲಿ ಇಟ್ಟುಕೊಳ್ಳುತ್ತಿದ್ದೆ ಎಂದು ಹೇಳಿರುತ್ತಾರೆ. ಆ ಮುಂದುವರೆದ ಸ್ವಇಚ್ಛಾ ಹೇಳಿಕೆಯನ್ನು ನೋಡುತ್ತಿದ್ದು ಅದನ್ನು **ನಿಪಿ-88** ಎಂದು ಸಾಕ್ಷಿಯ ರುಜುವನ್ನು ನಿಪಿ-88(ಎ) ಎಂದು, ಸಾಕ್ಷಿ ಗುರುತಿಸಿದ 1ನೇ ಆರೋಪಿತರ ರುಜುವನ್ನು ನಿಪಿ-88(ಬಿ) ಎಂದು ಗುರುತಿಸಲಾಯಿತು. ಸದರಿ ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ನ್ಯಾಯಾಲಯದ ಮುಂದೆ ಇದ್ದಾರೆ. ನಂತರ ಸದರಿ ಆರೋಪಿಯು ನ್ಯಾಯಾಂಗ ಬಂಧನಕ್ಕೆ ಸಿಬ್ಬಂದಿ ಬೆಂಗಾವಲಿನಲ್ಲಿ ಕಳುಹಿಸಿರುತ್ತೇನೆ,

11.ದಿನಾಂಕ 13-11-2009ರಂದು 14-11-09 ರಿಂದ 17-11-09ರವರೆಗೆ ಪೊಲೀಸ್ ವಶಕ್ಕೆ ನೀಡುವಂತೆ ನ್ಯಾಯಾಲಯಕ್ಕೆ ಮನವಿ ಸಲ್ಲಿಸಿರುತ್ತೇನೆ.

12.ದಿನಾಂಕ 14-11-2009ರಂದು ನ್ಯಾಯಾಲಯದ ಆದೇಶದಂತೆ 1ನೇ ಆರೋಪಿತರನ್ನು ಪೊಲೀಸ್ ವಶಕ್ಕೆ ಪಡೆದು ಅವರನ್ನು ಕೇರಳ ರಾಜ್ಯದ ಸುಲ್ತಾನ್ ಬಥೇರಿಗೆ ಕರೆದುಕೊಂಡು ಹೋದೆನು. ಅಲ್ಲಿ ಸುಲ್ತಾನ್ ಬಥೇರಿ ಪೊಲೀಸ್ ಠಾಣೆಗೆ ಹೋಗಿ ನಾಜಿರ್ ಮತ್ತು ಷಹಜಹಾನ್ ಬಗ್ಗೆ ವಿಚಾರ ಮಾಡಿದೆನ. ಷಹಜಹಾನ್ ಸಿಕ್ಕಿರುವುದಿಲ್ಲ. ಸದರಿ ಪಿ ಎಸ್ ನ ಮಾಹಿತಿಯಂತೆ ಆರೋಪಿ ನಾಜಿರ್ ಎರ್ನಾಕುಲಂ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಇರುವ ಬಗ್ಗೆ ಮಾಹಿತಿ ತಿಳಿಸಿದ್ದು, ನಂತರ ಸ್ಥಳೀಯ ಪೊಲೀಸರ ಸಹಾಯದಿಂದ 2ನೇ ಆರೋಪಿಯ ಮನೆಗೆ ಹೋಗಿ ಆಲ್ಲಿ ಆತನ ವಶಕ್ಕೆ ಪಡೆದೆನು. ಅಲ್ಲಿ ಆತನು 1ನೇ ಆರೋಪಿಯನ್ನು ಗುರುತಿಸಿದನು. ನಂತರ ಅವರಿಬ್ಬರನ್ನೂ ಕರೆದುಕೊಂಡು 16-11-2009ರಂದು ಸಕಲೇಶಪುರ ಠಾಣೆಗೆ ಬಂದೆನು.

13.2ನೇ ಆರೋಪಿ ಮೇಲೆದಸ್ತಗಿರಿ ಕ್ರಮ ಅನುಸರಿಸಿ ಸದರಿಯವರನ್ನು ವಿಚಾರಣೆ ಮಾಡಿದಾಗ ಸದರಿಯವರು ಮಲೆಯಾಳಂ ಭಾಷೆ ಮಾತನಾಡುತ್ತಿದ್ದುದರಿಂದ ಅವರನ್ನು ಪ್ರಸನ್ನ ಎಂಬುವವರ ಸಮಕ್ಷಮ ವಿಚಾರಣೆ ಮಾಡಿ ಅವರ ಮೂಲಕ ನಾನು ಕೇಳಿದ ಪ್ರಶ್ನೆಗಳನ್ನು 2ನೇ ಆರೋಪಿಗೆ ಮಲೆಯಾಳಂ ಭಾಷೆಯಲ್ಲಿ ತರ್ಜುಮೆ ಮಾಡಿ ಕೇಳಿಸಿ ಆತ ಹೇಳಿದಂತೆ ಸ್ವಇಚ್ಛಾ

ಹೇಳಿಕೆಯನ್ನು ದಾಖಲಿಸಿಕೊಂಡಿರುತ್ತೇನೆ. ತನ್ನ ಸ್ವಇಚ್ಛಾ ಹೇಳಿಕೆಯಲ್ಲಿ ಸದರಿ ಆರೋಪಿ ತಪ್ಪನ್ನು ಒಪ್ಪಿಕೊಂಡು ತನ್ನ ಜೇಬಿನಲ್ಲಿದ್ದ ಒಂದು ಐಡಿಕಾರ್ಡ್ ಒಂದು ಸಣ್ಣ ನೋಟ್ ಬುಕ್, ಎನ್ ಎಸ್ ಮೆಡಿಕಲ್ಸ್ ನ ಫೋನ್ ನಂಬರ್ ಮತ್ತು ಬ್ಯಾಂಕ್ ಮಾಹಿತಿಯುಳ್ಳ ಚೀಟಿಯನ್ನು ಹಾಜರುಪಡಿಸಿದ್ದನ್ನು ಪಂಚರ ಸಮಕ್ಷಮ ವಶಪಡಿಸಿಕೊಂಡು ನಿಪಿ-24 ರಂತೆ ಮಹಜರು ಮಾಡಿದೆನು. ಅದರಲ್ಲಿ ನನ್ನ ರುಜು ಇದ್ದು ನಿಪಿ-24(ಸಿ) ಎಂದು ಗುರುತಿಸಲಾಯಿತು. ಆತನ ಸ್ವಇಚ್ಛಾ ಹೇಳಿಕೆ ನೋಡುತಿತದ್ದು **ನಿಪಿ-89** ಎಂದು ಅದರಲ್ಲಿ ನಾನು ಸಹಿ ಹಾಕಿದ್ದು ಆರೋಪಿ ಸಹ ಸಹಿ ಮಾಡಿದ್ದು ಅವುಗಳನ್ನು ಕ್ರಮವಾಗಿ ನಿಪಿ-89(ಎ) ಮತ್ತು ನಿಪಿ-89(ಬಿ) ಎಂದು ಗುರುತಿಸಲಾಯಿತು. (ಮಾನ್ಯ ಅಭಿಯೋಜಕರು ನ್ಯಾಯಾಲಯದ ಮುಂದೆ ಇರುವ ಪ್ಯಾಕು ಮಾಡಿ ಸೀಲು ಮಾಡಿರುವ ಒಂದು ಪ್ಯಾಕೇಟನ್ನು ಒಡೆಯಲು ಅನುಮತಿ ಕೋರಿದ್ದು, ಅನುಮತಿ ನೀಡಿದೆ) ಪ್ಯಾಕು ಮಾಡಿದ ಸೀಲಾದ ಪ್ಯಾಕನ್ನು ತೆರೆದು ಅದರೊಳಗಿರುವ ಐಡಿ ಕಾರ್ಡ, ಫೋನ್ ನಂಬರ್ ಬರೆದಿರುವ ಒಂದು ಚೀಟಿ ಹಾಗೂ ಒಂದು ಚಿಕ್ಕ ನೋಟ್ ಬುಕ್ಕನ್ನು ತೋರಿಸಿದಾಗ ಇವೆ ಎಂದು ಗುರುತಿಸಿರುತ್ತಾರೆ. ಅವುಗಳನ್ನು ಒಟ್ಟಾಗಿ **ಎಂ.ಒ,11** ಎಂದು ಗುರುತಿಸಲಾಯಿತು. 2ನೇ ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ನ್ಯಾಯಾಲಯದ ಮುಂದೆ ಇದ್ದಾರೆ. ವಶಪಡಿಸಿಕೊಂಡ ಮಾಲು ಹಾಗೂ ಆರೋಪಿತರೊಂದಿಗೆ ಠಾಣೆಗೆ ಬಂದೆನು. ನಂತರ ಇಬ್ಬರನ್ನೂ ನ್ಯಾಯಾಲಯಕ್ಕೆ ಸಿಬ್ಬಂದಿಗಳ ಮೂಲಕ ಹಾಜರುಪಡಿಸಿರುತ್ತೇನೆ.

14. ದಿನಾಂಕ 26-11-2009ರಂದು 1ನೇ ಆರೋಪಿಯ ಸಹಿ ಮತ್ತು ಬರವಣಿಗೆಯನ್ನು ತಜ್ಞರ ಅಭಿಪ್ರಾಯಕ್ಕೆ ಕಳುಹಿಸುವ ಸಲುವಾಗಿ ಹಾಸನ ಔಷಧ ನಿಯಂತ್ರಕರಿಗೆ 1ನೇ ಆರೋಪಿತರ ಸಹಿ ಮತ್ತು ಬರವಣಿಗೆ ಇರುವ ದಾಖಲೆ ನೀಡುವಂತೆ ಕೋರಿ ಮನವಿ ಸಲ್ಲಿಸಿರುತ್ತೇನೆ. ಅವರು ಅದೇ ದಿನಾಂಕದಂದು ಅವರಿಂದ ದಾಖಲೆ ಪಡೆದಿದ್ದೇನೆ, ಆದರೆ ಅದನ್ನು ಕಡತಕ್ಕೆ ಅಳವಡಿಸಿಲ್ಲ.

15. ದಿನಾಂಕ 15-12-2009ರದು ಈ ಕೇಸಿನಲ್ಲಿ ವಶಪಡಿಸಿಕೊಂಡಿದ್ದ 3 ಸಿಪಿಯು, 1 ಸಿಡಿ ಪ್ಲೇಯರ್ ಮತ್ತು ವಿ ಆರ್ ಎಲ್ ನ consignment copy ನ್ನು ರಾಸಾಯನಿಕ ವಿಶ್ಲೇಷಣೆಗಾಗಿ ಹೈದರಾಬಾದಿನ ಸಿ ಎಫ್ ಎಸ್ ಎಲ್ ಗೆ ಕಳುಹಿಸಿರುತ್ತೇನೆ. ಅದನ್ನು ಸಮುಚಿತ ಮಾರ್ಗದಲ್ಲಿ

ಕಳುಹಿಸಿರುತ್ತೇನೆ. ಅದಕ್ಕೆ ಸಂಬಂಧಿಸಿದ 2 ಪತ್ರಗಳನ್ನು ನೋಡುತ್ತಿದ್ದು ನಿಪಿ-90 ಮತ್ತು 91 ಎಂದು ಗುರುತಿಸಲಾಯಿತು. ಅದರಲ್ಲಿ ನನ್ನ ರುಜು ಇದ್ದು ನಿಪಿ-90ಎ ಮತ್ತು 91 ಎ ಎಂದು ಗುರುತಿಸಲಾಯಿತು.

16.ದಿನಾಂಕ 17-12-2009ರಂದು ಪೊಲೀಸ್ ಮಹಾನಿರ್ದೇಶಕರ ಆದೇಶದಂತೆ ಮುಂದಿನ ತನಿಖೆಯನ್ನು ಸಿಐಡಿ ಬೆಂಗಳೂರು ಇವರಿಗೆ ಹಸ್ತಾಂತರಿಸಿರುತ್ತೇನೆ.

**ಪಾಟೀಸವಾಲುಃ 1ನೇ ಆರೋಪಿ ಪರ** ಶ್ರೀ ಎ ಹೆಚ್ ಬಿ **ವಕೀಲರಿಂದಃ**

ಔಷಧ ನಿಯಂತ್ರಕರು, ಹಾಸನ ಇವರು ನೀಡಿದ ನಿಪಿ-80ರ ಮಾಹಿತಿಯಲ್ಲಿ ಎನ್ ಡಿ ಪಿ ಎಸ್ ಕಾಯಿದೆಯ ಅನುಸೂಚಿಯ ಲಿಸ್ಟ್ ಆಫ್ psychotropic substance ನ ಪಟ್ಟಿಯ ಕ್ರಮ ಸಂಖ್ಯೆ 92 ರಲ್ಲಿ buprigesic injection ಕಾಣಿಸಿರುವುದರಿಂದ ಸದರಿ ಔಷಧ NDPS ಕಾಯಿದೆಯಡಿ ಬರಬಹುದೆಂದು ಅಭಿಪ್ರಾಯ ನೀಡಿದ್ದರಿಂದ ನಾನು ಆ ಪಟ್ಟಿ ತರಿಸಿ ನೋಡಿಲ್ಲ. ನಿಪಿ-80ರಲ್ಲಿ ಅವರು ತಾತ್ಕಾಲಿಕ ಅಭಿಪ್ರಾಯವನ್ನು ನೀಡಿರುತ್ತಾರೆಂದರೆ ಸರಿ. ಆ ಬಗ್ಗೆ ಮತ್ತೆ ನಾನು ಖಚಿತಪಡಿಸಿಕೊಂಡಿಲ್ಲ. ಸಾಯಿ ಟ್ರಾನ್ಸ್ಪೋರ್ಟ್ ಮತ್ತು ಕೊರಿಯರ್ ಲಿಮಿಟೆಡ್ ನಲ್ಲಿ ಈ ಔಷಧ ಇತ್ತೆಂದು ನಿಮಗೆಯಾರು ಹೇಳಿದ್ದು ಮತ್ತು ಯಾವ ಆಧಾರದಲ್ಲಿ ನೀವು ಅಲ್ಲಿಗೆ ಹೋಗಿ ನಿಪಿ-26ರಂತೆ ಪಂಚನಾಮೆ ನಡೆಸಿದ್ದು ಎಂದರೆ ಸಾಕ್ಷಿಯು ದೂರುದಾರರು ತಮ್ಮ ದೂರಿನಲ್ಲಿ ಹೇಳಿರುತ್ತಾರೆ ಮತ್ತು ತನಿಖೆಯಿಂದಲೂ ಅದು ಕಂಡುಬಂದಿತ್ತು ಹಾಗೆಯೇ ಆ ಪಾರ್ಸೆಲ್ ಅಲ್ಲಿಗೆ ವಾಪಸ್ ಹೋಗಿತ್ತು ಎನ್ನುತ್ತಾರೆ. ಆ ದಿವಸ ನಾನು ಸದರಿ ಸಾಯಿ ಟ್ರಾ ನ್ಸ್ಪೋರ್ಟ್ ಮತ್ತು ಕೊರಿಯರ್ ಲಿಮಿಟೆಡ್ ಗೆ ಹೋದದ್ದಿಲ್ಲ ಮತ್ತು ಅಲ್ಲಿ ಎಂ.ಒ.10, 10(1), 10(1ಎ1)ರ ವಸ್ತುಗಳನ್ನು ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ತಾಜ್ ಎಂಬುವವರು ನಾನು ಬರೆದುಕೊಂಡ ರೀತಿಯಲ್ಲಿ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ.

2.ನನ್ನ ತನಿಖಾ ಕಾಲದಲ್ಲಿ ನಾನು buprigesic injection ಖರೀದಿ ಮಾಡಲು ವೈದ್ಯರ ಚೀಟಿ ಕಡ್ಡಾಯವಾಗಿ ಬೇಕೇ ಎನ್ನುವ ಬಗ್ಗೆ ನಾನು ಯಾವುದೇ ದಾಖಲೆ ಪಡೆದಿಲ್ಲ ಅದನ್ನು ಪಡೆಯಲು

ನನಗೆ ತೊಂದರೆ ಇರಲಿಲ್ಲ. ರಾಜು ಏಜೆನ್ಸಿಯವರಲ್ಲಿ ನಾನು ವೈದ್ಯರ ಸಲಹೆ ಚೀಟಿ ಕಡ್ಡಾಯವಾಗಿ ಬೇಕೇ ಎನ್ನುವ ಬಗ್ಗೆ ವಿಚಾರ ಮಾಡಲಿಲ್ಲ. ಸದರಿ ಇಂಜೆಕ್ಷನ್ ನ್ನು ಖರೀದಿಸಲು ವೈದ್ಯರ ಸಲಹಾ ಚೀಟಿ ಬೇಕಾಗಿಲ್ಲ ಎಂದರೆ ಸರಿಯಲ್ಲ. ದೂರುದಾರರನ್ನು ಕೂಡ ವೈದ್ಯರ ಸಲಹಾ ಚೀಟಿ ಬೇಕೋ ಎಂದು ನಾನು ವಿಚಾರ ಮಾಡಿರುತ್ತೇನೆ.

3.12-11-2009ರಂದು ನಾನು ಬರೆದುಕೊಂಡಂತೆ 1ನೇ ಆರೋಪಿ ನಿಪಿ-88ರ ರೀತಿಯ ಯಾವುದೇ ಮುಂದುವರೆದ ಸ್ವಇಚ್ಛಾ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ. ಎಂ.ಒ.11ರಲ್ಲಿ ಇದ್ದಂತಹ ಒಂದು ಚೀಟಿಯಲ್ಲಿ ಮೊದಲನೇ ಆರೋಪಿ ಬಗ್ಗೆ ಇತ್ತೆಂದು ಹೇಳುವ ಬರವಣಿಗೆ ಯಾರದೆಂದು ನಾನು ತನಿಖೆ ಮಾಡಿಲ್ಲ. 2ನೇ ಆರೋಪಿತರು ಅಕ್ಷರಸ್ಥರೋ ಅಥವಾ ಇಂಗ್ಲಿಷ್ ಓದಲು ಬರೆಯಲು ಬರುತ್ತದೋ ಎಂದು ನಾನು ತನಿಖೆ ಮಾಡಿಲ್ಲ. 1ನೇ ಆರೋಪಿಯಬಗ್ಗೆ ಇತ್ತೆಂದು ಹೇಳುವ ಬರವಣಿಗೆ ಇಂಗ್ಲಿಷ್ ನಲ್ಲಿತ್ತು ಎಂದರೆ ಸರಿ.

4.ಔಷಧ ನಿಯಂತ್ರಕರಲ್ಲಿ ಆರೋಪಿತರ ಬರವಣಿಗೆ ದಾಖಲೆ ಕೇಳಲು ಏನು ಕಾರಣ ಎಂದರೆ ಸಾಕ್ಷಿಯು ಅವರಿಗೇನಾದರೂ ಅಫಿಷಿಯಲ್ ಆಗಿ ಬಂದಿತ್ತಾ ಎಂದು ತಿಳಿದುಕೊಳ್ಳಲು ಎನ್ನುತ್ತಾರೆ. ಸದರಿಯವರು ನೀಡಿದ ದಾಖಲೆಯನ್ನು ಕಡತಕ್ಕೆ ಏಕೆ ಅಳವಡಿಸಿಕೊಳ್ಳಲಿಲ್ಲ ಎಂದರೆ ಸಾಕ್ಷಿಯು ಆ ಸಮಯದಲ್ಲಿ ನನಗೆ ಅದರ ಅವಶ್ಯಕತೆ ಕಂಡುಬರಲಿಲ್ಲ ಎನ್ನುತ್ತಾರೆ. ಅದು ನಮ್ಮ ತನಿಖೆಗೆ ವ್ಯತಿರಿಕ್ತವಾಗಿ ಇದೆ ಎನ್ನುವ ಕಾರಣಕ್ಕೆ ಕಡತಕ್ಕೆ ಅಳವಡಿಸಿಲ್ಲ ಎಂದರೆ ಸರಿಯಲ್ಲ. ನನ್ನ ತನಿಖಾ ಕಾಲದಲ್ಲಿ 1ನೇ ಆರೋಪಿತರ ಮೇಲಿನ ಆಪಾದನೆಗೆ ಸಂಬಂಧಿಸಿದಂತೆ ಯಾವುದೇ ಸಾಕ್ಷ್ಯಾಧಾರಗಳು ಇಲ್ಲ ಎಂದು ನನ್ನ ಗಮನಕ್ಕೆ ಬಂದಿತ್ತು ಎಂದರೆ ಸರಿಯಲ್ಲ. ನಮ್ಮ ತನಿಖೆಗೆ ಅನುಕೂಲವಾಗುವ ರೀತಿಯಲ್ಲಿ ಸಾಕ್ಷ್ಯಾಧಾರಗಳನ್ನು ಸೃಷ್ಟಿಸಿದ್ದು ಎಂದರೆ ಸರಿಯಲ್ಲ.

**ಪಾಟೀಸವಾಲುಃ 2ನೇ ಆರೋಪಿ ಪರ ಶ್ರೀ ಜೆ ಎಸ್ ವಕೀಲರಿಂದಃ**

2ನೇ ಆರೋಪಿತರು ಯಾವುದೇ ಸ್ವಇಚ್ಛಾ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ. ಎಂ.ಒ.11ರಲ್ಲಿ ಇದ್ದಂತಹ 2ನೇ ಆರೋಪಿತರೆಂದು ಹೇಳುವ ಗುರುತಿನ ಚೀಟಿಯ ಸತ್ಯಾಸತ್ಯತೆಯಬಗ್ಗೆ

ನನ್ನ ತನಿಖಾ ಕಾಲದಲ್ಲಿ ತನಿಖೆ ಮಾಡಿಲ್ಲ.

(ಉಳಿದಂತೆ 1ನೇ ಆರೋಪಿತರ ಪರ ವಕೀಲರ ಪಾಟೀಸವಾಲನ್ನು ಅಳವಡಿಸಿಕೊಳ್ಳುವುದಾಗಿ ಹೇಳುತ್ತಾರೆ, ಅನುಮತಿಸಿದೆ)

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್**

**ನ್ಯಾಯಾಧೀಶರು, ಹಾಸನ.**